ಕರ್ನಾಟಕ ಸರ್ಕಾರ
ತಾಂತ್ರಿಕ ಶಿಕ್ಷಣ ಇಲಾಖೆ
ರಾಷ್ಟ್ರೀಯ ಸೇವಾ ಯೋಜನೆ

**ಸಂಖ್ಯೆ:** ಡಿಟಿಇ/ಎನ್‌ಎಸ್‌ಎಸ್/01/ಐಡಿಪಿ/2025-26/04

ಆಯುಕ್ತರವರ ಕಛೇರಿ,
ಅರಮನೆ ರಸ್ತೆ, ಬೆಂಗಳೂರು-01,
ದಿನಾಂಕ: 15.05.2025

**ಸುತ್ತೋಲೆ**

**ವಿಷಯ** : ಪ್ರಧಾನ ಮಂತ್ರಿ ರಾಷ್ಟ್ರೀಯ ಬಾಲ ಪುರಸ್ಕಾರಕ್ಕೆ (PMRBP) ನಾಮ ನಿರ್ದೇಶನಕ್ಕೆ ನೊಂದಣಿ ಮಾಡುವ ಬಗ್ಗೆ.

**ಉಲ್ಲೇಖ** : ಕೇಂದ್ರ ಸರ್ಕಾರದ ಪತ್ರ ಸಂಖ್ಯೆ: 24-1/NSS/DTE/2024/1188-1204 Date: 09th may,2025

*****

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿದಂತೆ ಪ್ರತಿಭಾನಿತ್ವ ಮಕ್ಕಳನ್ನು ಗೌರವಿಸಲು ಪ್ರಧಾನ ಮಂತ್ರಿ ರಾಷ್ಟ್ರೀಯ ಬಾಲ ಪುರಸ್ಕಾರ (PMRBP) ನೀಡಲಾಗುತ್ತಿದ್ದು, ವಿವಿಧ ಕ್ಷೇತ್ರಗಳಲ್ಲಿ ಮಕ್ಕಳ ಅಸಾಧಾರಣ ಸಾಧನೆಗಳನ್ನು ಗುರುತಿಸಲು ನೀಡುವ ಈ ಪ್ರತಿಷ್ಠಿತ ರಾಷ್ಟ್ರೀಯ ಪ್ರಶಸ್ತಿಯನ್ನು 18 ವರ್ಷ ವಯಸ್ಸಿನೊಳಗಿನ ಶೌರ್ಯ, ಸಾಮಾಜಿಕ ಸೇವೆ, ಪರಿಸರ, ಕ್ರೀಡೆ, ಕಲೆ ಮತ್ತು ಸಂಸ್ಕೃತಿ ಮತ್ತು ವಿಜ್ಞಾನ ಮತ್ತು ತಂತ್ರಜ್ಞಾನ ಎಂಬ ಆರು ವಿಭಾಗಗಳ ಅಡಿಯಲ್ಲಿ ನೀಡಲಾಗುತ್ತದೆ.

ಈ ನಿಟ್ಟಿನಲ್ಲಿ ಮಹಿಳಾ ಮತ್ತು ಅಭಿವೃದ್ಧಿ ಸಚಿವಾಲಯವು ಪ್ರಧಾನ ಮಂತ್ರಿ ರಾಷ್ಟ್ರೀಯ ಬಾಲ ಪುರಸ್ಕಾರದ ನೊಂದಣಿಗಾಗಿ ರಾಷ್ಟ್ರೀಯ ಪುರಸ್ಕಾರ ಪೋರ್ಟಲ್ (https://awards.gov.in) ಮೂಲಕ ಆನ್‌ಲೈನ್ ನಲ್ಲಿ ನಾಮನಿರ್ದೇನಗಳನ್ನು/ಶಿಫಾರಸುಗಳನ್ನು ಆಹ್ವಾನಿಸಿದೆ. ಇದಕ್ಕಾಗಿ ನಿರ್ದಿಷ್ಟ ಲಾಗಿನ್ ಐಡಿಯನ್ನು ರಚಿಸಲಾಗಿದ್ದು, ನಾಮ ನಿರ್ದೇಶನಗಳನ್ನು ಆನ್ ಲೈನ್ ನಲ್ಲಿ ಸಲ್ಲಿಸಲು ಅನುಕೂಲವಾಗುವಂತೆ ಬಳಕೆದಾರ ಹೆಸರು A255443206 ಮತ್ತು ಪಾಸ್ ವರ್ಡ್ :Aud051#166 ಮೂಲಕ ಸಲ್ಲಿಸಬಹುದಾಗಿದೆ.

ಈ ಕುರಿತು ಅಗತ್ಯ ಕ್ರಮವಹಿಸಲು ಇಲಾಖಾ ವ್ಯಾಪ್ತಿಗೊಳಪಡುವ ರಾಜ್ಯದ ಎಲ್ಲಾ ಸರ್ಕಾರಿ, ಅನುದಾನಿತ ಹಾಗೂ ಖಾಸಗಿ ತಾಂತ್ರಿಕ ಶಿಕ್ಷನ ಸಂಸ್ಥೆಗಳ ಪ್ರಾಚಾರ್ಯರಿಗೆ ಸೂಚಿಸಲಾಗಿದೆ.

ನಿರ್ದೇಶಕರು

ಇವರಿಗೆ:

1. ರಾಜ್ಯದ ಎಲ್ಲಾ ತಾಂತ್ರಿಕ ಶಿಕ್ಷಣ ಸಂಸ್ಥೆಗಳ ಪ್ರಾಚಾರ್ಯರುಗಳಿಗೆ - ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ.
2. ನಿರ್ದೇಶಕರು, ಭಾರತ ಸರ್ಕಾರದ ಪ್ರಾಂತೀಯ ನಿರ್ದೇಶನಾಲಯ, ಬಸವನಗುಡಿ ಬೆಂಗಳೂರು-01.ಇವರ ಮಾಹಿತಿಗಾಗಿ.
3. ಇ - ಆಡಳಿತ -ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು.
4. ಕಛೇರಿ ಪ್ರತಿ.